ಶ್ರೀ ಬಿ. ಜೆ. ಲಿಂಗೇಗೌಡ.—ಅಕ್ಕಿಯ ಪ್ರಮಾಣವನ್ನು ಗೊತ್ತು ಮಾಡುವಾಗ ಯಾವ ಅಂಶಗಳನ್ನು ಪ್ರಾಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಲಾಗುವುದು ?

Sri B. D. JATTI—(1) Availability of rice with the Government and (2) the necessity of the area are taken into consideration.

ಶ್ರೀ ಸಿದ್ಧಯ್ಯ ಕಾಶೀಮಠ.—ಅಕ್ಕಿ ಬೆಳೆಯುವ ಶಿವಮೊಗ್ಗ ಜಿಲ್ಲೆಗೆ ಹೆಚ್ಚು ಅಕ್ಕಿ ಕೊಟ್ಟು ಜನಸಂಖ್ಯೆ ಜಾಸ್ತಿಯಾಗಿರುವ ಧಾರವಾಡಕ್ಕೆ ಕಡಮೆ ಕೊಟ್ಟಿರುವುದಕ್ಕೆ ಕಾರಣವೇನು ?

Sri B. D. JATTI.—In the areas where the people are accustomed to rice will be given more rice and in Dharwar people are accustomed to Jowar.

ಶ್ರೀ ಬಿ. ಚನ್ನಬೈರೇಗೌಡ.—ಒಂದು ನಲ ಡೆಪ್ಯುಟೇಷನ್ ಬಂದಿದ್ದಾಗ ಜನಸಂಖ್ಯೆ ಆಧಾರದ ಮೇಲೆ ಜಿಲ್ಲಾವಾರು ಹಂಚುವುದಾಗಿ ಹೇಳಿದ್ದರೂ ಕೂಡ ಬೆಂಗಳೂರು ಜಿಲ್ಲೆಗೆ ಕಡಮೆ ಕೊಟ್ಟು ಕೋಲಾರ, ಮೈಸೂರು ಮುಂತಾದ ಜಿಲ್ಲೆಗಳಿಗೆ ಜಾಸ್ತಿ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಬೆಂಗಳೂರು ಸಿಟಿ ಮುತ್ತು ಕೋಲಾರ ಮೈನಿಂಗ್ ಪ್ರದೇಶ ಈ ಎರಡು ಸ್ಥಳಗಳಲ್ಲೂ ಇನ್‌ಫಾರ್ಮಲ್ ರೇಷನಿಂಗ್ ಇದೆ. ಆದುದರಿಂದ ಆ ಪ್ರತಿ ಪ್ರದೇಶದಲ್ಲೂ ಒಬ್ಬರಿಗೆ ೪ ಕೆ. ಜಿ. ಆಹಾರ ಪದಾರ್ಥ ಕೊಡುವುದರಲ್ಲಿ ಅಕ್ಕಿ 3 ಕೆ. ಜಿ. ಕೊಡುತ್ತಿದೆ. ಆದರೆ ಮೈನಿಂಗ್ ಪ್ರದೇಶದ ಪಕ್ಕದಲ್ಲಿ ರಾಬರ್ಟ್‌ಸನ್‌ಪೇಟೆ ಇರುವುದರಿಂದ ಅಲ್ಲಿಗೆ ಕೂಡ ಸ್ವಲ್ಪ ಹೆಚ್ಚು ಕೊಡಲಾಗಿದೆ.

ಶ್ರೀ ಜಿ. ರಾಮೇಗೌಡ.—100 ಟನ್ ಅಕ್ಕಿಯನ್ನು 14 ಲಕ್ಷ ಜನರಿಗೆ ಯಾವ ರೀತಿ ಹಂಚುತ್ತಾರೆ ?

ಶ್ರೀ ಬಿ. ಡಿ. ಜತ್ತಿ.—ಕಾಯಿಲೆ ಇರುವವರಿಗೆ, ಬಾಣಂತಿಯರು ಮುಂತಾದವರಿಗೆ ಪ್ರಾಶಸ್ತ್ಯ ಕೊಟ್ಟು ಅವರಿಗೆ ಹಂಚಿ ಉಳಿದಿರುವುದನ್ನು ಅವಶ್ಯಕತೆ ಇರುವವರಿಗೆ ಕೊಡಲಾಗುವುದು.

ಶ್ರೀ ಬಿ. ಜೆ. ಲಿಂಗೇಗೌಡ.—ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 400 ಟನ್ ಕೊಟ್ಟು ಬೆಂಗಳೂರು (ನಗರ ಪ್ರದೇಶ) ಜಿಲ್ಲೆಗೆ 150 ರಿಂದ 600 ಟನ್‌ಗಳನ್ನು ಯಾವ ಆಧಾರದಮೇಲೆ ಕೊಟ್ಟಿರುವುದು ? ಎರಡು ತಾಲ್ಲೂಕುಗಳಿಗೆ 600 ಟನ್ ಕೊಟ್ಟು ಗ್ರಾಮಾಂತರ ಜಿಲ್ಲೆಗೆ 400 ಟನ್ ಯಾವ ಆಧಾರದಲೆಲೆ ಕೊಡಲಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಜನರ ಬೇಡಿಕೆ ಮೇಲೆ ಕೊಡಲಾಗಿದ್ದರೂ ಕೂಡ ಅದನ್ನು ಸಂಪೂರ್ಣವಾಗಿ ಹಂಚುವುದಿಲ್ಲ. ಅವಶ್ಯವಿದ್ದರೆ ಹಂಚುವುದಕ್ಕೂ ಇಲ್ಲದಿದ್ದರೆ ಉಳಿಸುವುದಕ್ಕೂ ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಕೊಟ್ಟಿರುವುದನ್ನೆಲ್ಲಾ ಹಂಚಿ ಎಂದು ಹೇಳಿಲ್ಲ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಜಿಲ್ಲೆಯಲ್ಲ ಕೇಳಿದಷ್ಟು ಅಕ್ಕಿ ಕೊಡಲಾಗುತ್ತಿದೆಯೇ?

ಶ್ರೀ ಬಿ. ಡಿ. ಜತ್ತಿ.—ಹಾಗೆ ಕೊಡುವುದಿಲ್ಲ, ಅಕ್ಕಿಯ ಅಭಾವವಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಚನ್ನಪಟ್ಟಣದ ಒಂದೂವರೆ ಲಕ್ಷ ಪ್ರಜೆಗಳಿಗೆ ಕೊಟ್ಟಿರುವ 11 ಟನ್ ಅಕ್ಕಿಯು ನರಿಯಾಗಿ ಹಂಚಿಕೆಯಾಗುತ್ತಿದೆಯೇ ?

ಶ್ರೀ ಬಿ. ಡಿ. ಜತ್ತಿ.—ನರಿಯಾಗಿ ಹಂಚಬೇಕೆಂದು ತಿಳಿಸಿದೆ, ಒಂದು ವೇಳೆ ಲೋಪವಿದ್ದರೆ ನರಿಪಡಿಸುತ್ತೇವೆ.

Food situation in South Kanara District

*Q.—31. Sri A. KRISHNA SHETTY (Mangalore-II).—

Will the Minister for Food be pleased to state :—

(*a*) whether Government are aware of the worsening food situation in South Kanara District and the abnormal rise in the price of food articles ;

(*b*) the steps taken by the Government to solve the food problem and to bring down the prices ;]

(SRI A. KRISHNA SHETTY)

(*c*) the date from which informal rationing is discontinued in Mangalore town;

(*d*) what is the present arrangement to supply rice to Mangalore Town and the present monthly quota allotted;

(*e*) whether any arrangement is made to allot certain quota of rice to deficit rural areas and more especially to coastal and Belt areas in the State ?

A.— SRI B. D. JATTI (Minister for Food).—

(*a*) The Food situation in South Kanara district as elsewhere in the State was not particularly good during the crop year 1965-66, but it cannot be said that the situation in South Kanara district was particularly bad or that it worsened during June 1966. The prices of food articles also rose, throughout the state and there was nothing special about South Kanara District in this regard either.

(*b*) The following measures are taken by Government to arrest rise in the price of foodgrains and to bring down their prices to the extent possible :—

(i) the export of foodgrains grown in the state from any place within the State to any place outside the State has been prohibited excepting on export permits issued by the Authority competent to do so.

(ii) Stock of foodgrains have been built up by procuring foodgrains locally and by supplementing the foodgrains so procured with the foodgrains alloted by the Government of India for distribution in the State.

(iii) Informal Rationing has been introduced in Bangalore City and in the K.G.F. where foodgrains are issued on ration cards at 8 Kgs. per adult per month; in towns and villages having a population of 5,000 and above and in other towns with a concentration of labour population whatever foodgrains are available are issued at the rate of 5 Kgs. per adult per month. Similarly whatever foodgrains are available are issued at 5 Kgs. per adult per month to special classes of population like rural artisans, agricultural labour, weavers, plantation labour, railway employees and Class III and Class IV Government Servants elsewhere in the State. Foodgrains are issued on an *ad hoc* basis in the rural areas where crops have failed and also in all other places not covered under the distribution system explained above.

(iv) Restrictions on the Inter District Movement of foodgrains have been removed, so that foodgrains could move without any difficulty from areas in which they are produced and are in surplus to areas in which they are needed most.

(v) (*a*) The Government of India increased the prices of coarse, medium, fine and superfine varieties of rice that are being allotted by them to the States. The State Government decided to absorb these small increases and not to effect any changes in the issue prices of rice within the State.

(*b*) The Government of India reduced the price of milo which is being allotted by them to the States by Rs. 7 per quintal. This benefit has been passed on to the consumers in the State by reducing the issue prices correspondingly.

(*c*) The State Government have reduced the issue prices of wheat products within the State by Rs. 5.

(*d*) The State Government have also reduced the issue prices of jowar and ragi by Rs. 5 per quintal in each case.

Government have got Fair Price Shops opened by Co-operative Societies and by private dealers wherever it was necessary to do so and they will get some more such shops opened if it becomes necessary to do so.

(*e*) With effect from 1st December 1965.

(*d*) Up to the 30th June, 1966 a quantity of 300 tonnes of rice per month was permitted to be utilised in South Kanara District. The quantity authorised to be utilised was increased to 350 tonnes per month with effect from 1st July 1966 and to 650 tonnes per month from 1st September 1966 in view of the pressing demand for rice from the District. Internal distribution is left to the Deputy Commissioners. The rice allotted to the district is being used for distribution in Mangalore Town at 2 Kgs. and 1 Kg. per adult and per child respectively per month to the poorer sections of the people and to Institutions elsewhere.

(*e*) The Deputy Commissioner considers how best to serve the needs of the District within the permitted utilisation. The quantiyt permitted for utilisation depends on the rice stock available under the control of the State Government and the needs of the several districts in the State.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳಕ್ಕೆ ಅಕ್ಕಿ ಹೋಗುತ್ತಿರುವುದರಿಂದ ದಕ್ಷಿಣ ಕನಡಾಕ್ಕೆ ಹೆಚ್ಚು ದೊರೆಯುತ್ತಿಲ್ಲ ಮತ್ತು ಅಲ್ಲ ಹೆಚ್ಚು ಅಕ್ಕಿ ಉಪಯೋಗಮಾಡುವುದರಿಂದ ಮತ್ತು ಹೆಚ್ಚು ಬೆಳೆಯುವುದರಿಂದ ಅಲ್ಲಗೆ ಹೆಚ್ಚು ಒದಗಿಸುವುದು ಅಗತ್ಯವಲ್ಲವೇ ?

† ಶ್ರೀ ಬಿ. ಡಿ. ಜತ್ತಿ.—ಪ್ರಶ್ನೆಯ ಮೊದಲನೆಯ ಭಾಗವನ್ನು ಒಪ್ಪುವುದಿಲ್ಲ. ಈಗ ಕೇರಳಕ್ಕೆ ಹೋಗುವುದಿಲ್ಲ, ಅಲ್ಲಗೆ ಹೋಗುತ್ತಿದ್ದರೆ ಶಿವಮೊಗ್ಗಾಕ್ಕೆ ಅಕ್ಕಿ ದೊರೆಯುತ್ತಿರಲಿಲ್ಲ. ಆದುದರಿಂದ ಆ ಪ್ರಶ್ನೆಗೆ ಅವಕಾಶವೇ ಇಲ್ಲ. ಎರಡನೆಯದಾಗಿ ಮಂಗಳೂರು ಅಕ್ಕಿ ಹೆಚ್ಚು ಉಪಯೋಗಮಾಡುವ ಸ್ಥಳವಾದ್ದರಿಂದ ಅಲ್ಲಗೆ ಹೆಚ್ಚಿಗೆ ಕೊಡಲಾಗಿದೆ. 1-7-1966ರವರೆಗೆ 300 ಟನ್ ಕೊಟ್ಟಿದೆ, ನಂತರ 1-9-1966ರವರೆಗೆ 450-400 ಟನ್ ಕೊಡಲಾಗಿದೆ, 1-9-1966ರ ನಂತರ 650 ಟನ್ ಕೊಡಲಾಗಿದೆ. ಅದಕ್ಕಿಂತ ಹೆಚ್ಚಿಗೆ ಕೊಡಲು ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂಗಳೂರಿನಿಂದ ಪಾಕೀಸ್ತಾನ ಮುಂತಾದ ಕಡೆಗಳಿಗೆ ಕೊರತೆಯ ದೆಶೆಯಿಂದ ಸಾಗಿಹೋಗುವ ಅಕ್ಕಿಯನ್ನು ತಡೆಗಟ್ಟಲು ಏನು ಕ್ರಮ ಕೈಕೊಳ್ಳಲಾಗಿದೆ ?

†Indicates that the remarks or speeches have not be n revised by the Member concerned

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಸ್ಪೆಷಲ್ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಪಾಕಿಸ್ತಾನಕ್ಕೆ ಹೋಗುತ್ತದೆ ಎಂಬುದನ್ನು ನಾನು ಇದೇ ಮೊದಲನೆಯ ಸಲ ಕೇಳಿದ್ದು. ಆದರೆ ಜಿಲ್ಲೆ ಬಿಟ್ಟು ಹೊರಗೆ ಹೋಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ, ಅಲ್ಪ ಸ್ವಲ್ಪ ಹೋಗುತ್ತಿರಬಹುದು. ಹೊರಗೆ ಹೋಗದಂತೆ ಫುಡ್‌ಸೆರ್ ಎಷ್ಟು ಬೇಕೋ ಅಷ್ಟನ್ನು ನೇಮಿಸಿದೆ. ಹಿಂದೆ ಸೇಕಡ ನೂರರಷ್ಟು ಹೋಗುತ್ತಿದ್ದರೆ ಈಗ ಸೇಕಡ 10-15 ಭಾಗ ಹೋಗಬಹುದು, ಸೇಕಡ 85 ಭಾಗ ಹೋಗುವುದನ್ನು ತಡೆಗಟ್ಟಲಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಪೆಟ್ರೋಲ್ ಪೋರ್ಸ್ ಹಾಕಿರುವುದು ಸರಿಯಾಗಿದೆ, ಅದೇ ಹೊತ್ತಿನಲ್ಲಿ ನಾನು ಹಿಡಿಯುವ ಇಂಜನ್ ಇರುವ ಬೋಟ್‌ನಲ್ಲಿ ಅಕ್ಕಿಯನ್ನು ಕೇರಳಕ್ಕೆ ಸಾಗಿಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೋ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ, ಅವರು ಹೇಳುತ್ತಾ ಇರುವುದು ನನಗೆ ಇಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ಗೋಧಿ ಮತ್ತು ಗೋಧಿಯ ಇತರ ಪದಾರ್ಥಗಳ ಬೆಲೆ 5 ರೂಪಾಯಿ ಹೆಚ್ಚು ಮಾಡುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಇಮುವರೆಗೂ ಕೇಂದ್ರದವರು ನಮಗೆ ಕೊಡತಕ್ಕ ಅಕ್ಕಿ, ಗೋಧಿ ಮತ್ತು ಮೈಲೋ ಇವುಗಳಿಗೆ ಸಬ್ಸಿಡಿ ಕೊಡುತ್ತಾ ಇದ್ದರು, ಆ ರೀತಿ ಕೊಡುವುದರಿಂದ ಹಣ ಹೆಚ್ಚಾಗಿ ಹೋಗುತ್ತದೆ ಎಂದು ಅಂದುಕೊಂಡು ನಿಲ್ಲಿಸಿದ್ದಾರೆ, ಆದರೆ ಹೆಚ್ಚು ಮಾಡುವಾಗ ಹಂತ ಹಂತವಾಗಿ ಮಾಡಬೇಕೆಂದು ಹೇಳಿದ್ದಾರೆ. ಅದರ ಸಲುವಾಗಿ ಈ ರೀತಿ ಮಾಡಬೇಕಾಗಿದೆ.

ಶ್ರೀ ಜಿ. ರಾಮೇಗೌಡ.—ಜಿಲ್ಲೆಯಿಂದ ಜಿಲ್ಲೆಗೆ ಸಾಗಾಣಿಕೆ ಮಾಡುವಾಗ ಹೋಲ್‌ಸೇಲರ್ಸ್ ಜಿಲ್ಲಾ ಡೆಪ್ಯುಟಿ ಕಮಿಷನರ ಪರ್ಮಿಟ್ ತೆಗೆದುಕೊಳ್ಳಬೇಕೆಂಬ ಪದ್ಧತಿ ಇದೆಯಲ್ಲವೇ ?

Sri B. D. JATTI.—There is no ban on the movement of foodgrains within the State ; but if one wholesaler wants to sell his stock to another wholesaler, he will have to take the permission from D.C. under the Licensing Order.

ಶ್ರೀ ಎ. ಕೃಷ್ಣಶೆಟ್ಟಿ.—ಮಂಗಳೂರು ನಗರದಲ್ಲಿ ಮತ್ತು ಅದರ ಪರಿಸರದಲ್ಲಿ ಈಗ ಡಾಲರ್ ಸಂಪಾದನೆ ಮಾಡತಕ್ಕ ಗೋಡಂಬಿ ಕೆಲಸಗಾರರು 12 ಸಾವಿರ ಜನರು ಇದ್ದಾರೆ. ಹೆಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕವರು ಸಾಧಾರಣ 12 ಸಾವಿರ ಜನರು ಇದ್ದಾರೆ. ಅದೇ ರೀತಿ ಬೀಡಿ ಮತ್ತು ಇತರ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರು 10-12 ಸಾವಿರ ಜನ ಕೆಲಸಗಾರರು ಇದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಮಜ್ದೂರು ಕೆಲಸಗಾರರು ಅಲ್ಲದೆ ರೈಲ್ವೆ ಮತ್ತು ಬಂದರು ಕೆಲಸಗಳು ಅಲ್ಲಿ ನಡೆಯುತ್ತಾ ಇರುವಾಗ ಅದಕ್ಕೆ ಸಂಬಂಧಪಟ್ಟ ಕೆಲಸಗಾರರು ಸಾವಿರಾರು ಜನರು ಇರುವಾಗ ಅಲ್ಲೂ ಕೂಡ ಕೋಲಾರದ ಹಾಗೆ ಇನ್‌ಫಾರ್ಮಲ್ ರೇಷನಿಂಗ್ ಜಾರಿ ಮಾಡಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಮಂಗಳೂರಿನ ಜನತೆಗೆ ಇನ್‌ಫಾರ್ಮಲ್ ರೇಷನಿಂಗ್‌ನ ಅವಶ್ಯಕತೆ ಕಾಣುಲಿಲ್ಲ. ಅಕ್ಕಿ ಅಲ್ಲಿ ಹೆಚ್ಚು ಬೇಡಿಕೆ ಇದೆ ಎಂದು ಹೇಳಿದರು, ಅದನ್ನು ಲೆಕ್ಕಾ ಹಾಕಿ 300 ಟನ್ ಪ್ರತಿ ತಿಂಗಳು ಕೊಡುವುದು ಹೆಚ್ಚು ಮಾಡಿದ್ದಾರೆ, ಉಳಿದದ್ದು ಮೈಲೊ ಮತ್ತು ಗೋಧಿ ಎಷ್ಟು ಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಅದರಲ್ಲಿ ತಾವು ಹೇಳಿದ ವರ್ಕರ್ಸ್, ಆರ್ಟಿಸಾನ್ಸ್ ಎಲ್ಲರೂ ಬರುತ್ತಾರೆ.

ಶ್ರೀ ಎಸ್. ಎಸ್. ಕೋಲ್ಕೆಬೈಲ್.—ಅವರುಗಳೆಲ್ಲರೂ ಮಂಗಳೂರಿನಲ್ಲೇ ಇರುವುದಿಲ್ಲ, ಮಂಗಳೂರಿನ ಹೊರಗೆ ರೈಲ್ವೆ ಮತ್ತು ಬಂದರು ಕೆಲಸಗಳು ಆಗುತ್ತಾ ಇವೆ, ಆದ್ದರಿಂದ ಅಲ್ಲಿ ಅಕ್ಕಿಯನ್ನು ಕೊಡಲಿಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಡೆಪ್ಯೂಟಿ ಕಮಿಷನರ ಕಡೆಗೆ ಸ್ಟಾಕ್ ಇರುತ್ತದೆ ಅವರು ಡಿಸ್ಕ್ರೀಷನ್ ಉಪಯೋಗ ಮಾಡಿ ಮಂಗಳೂರಿನ ಹೊರಗೂ ಕೂಡ ಕೊಡಬಹುದು, ಅದಕ್ಕೆ ಯಾವ ನಿರ್ಬಂಧವೂ ಇಲ್ಲ.

Sri C. J. MUCKANNAPPA.—Supplementary to (b) : What is the the total food available in the State and what steps Government have taken to maintain the price ?

Sri B. D. JATTI.—We can procure a little over 1 lakh tons of paddy. That is being distributed whenever we do not get rice from Andhra, Madras or Foreign Countries. That is the only stock we could build up last year.

ಶ್ರೀ ಇ. ನಾರಾಯಣ ಗೌಡ.—ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಅಕ್ಕಿ ವಸೂಲು ಮಾಡಿದ್ದೀರಿ. ಲೆವಿ ವಸೂಲು ನಾಡಬೇಕೆಂದು ಡೆಪ್ಯೂಟಿ ಕಮಿಷನರಿಗೆ ಹೇಳಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ.

ಶ್ರೀ ಜಿ. ರಾಮೇಗೌಡ.—ಗೋಧಿ ಮತ್ತು ಜೋಳಕ್ಕೆ ಕ್ವಿಂಟಾಲ್ ಒಂದಕ್ಕೆ 5 ರೂಪಾಯಿ ಕಡಿಮೆ ಮಾಡಿದ್ದಿರಿ, ಮತ್ತೆ ಅದನ್ನು ಜಾಸ್ತಿ ಮಾಡಿದ್ದೀರಲ್ಲ ಅದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಆಗಲೇ ಒಂದು ಸಾರಿ ಹೇಳಿದೆ. ಕಡಲೇಬೇಳೆ ಮತ್ತು ಕಡಲೆ ಯಾವ ರೇಟಿನಂತೆ ಮಾರಾಟ ಮಾಡಬೇಕಾಗಿತ್ತೋ ಅದಕ್ಕಿಂತ ಹೆಚ್ಚು ರೇಟಿನಂತೆ ಮಾರಾಟ ಮಾಡುತ್ತಾ ಇದ್ದೆವು, ಅದರಲ್ಲಿ ಬಂದಂಥ ಲಾಭ ಸರ್ಕಾರದವರು ಉಪಯೋಗ ಮಾಡುವುದಿಲ್ಲ. No profit no loss ಆಧಾರದ ಮೇಲೆ ಮಾರಾಟ ಮಾಡಿ ಲಾಭ ಕನ್ಸ್ಯೂಮರ್‌ಗೇ ಹೋಗಬೇಕೆಂಬ ದೃಷ್ಟಿಯಿಂದ ಮೈಲೋ ಮತ್ತು ಜೋಳ, ರಾಗಿಗೆ 5 ರೂಪಾಯಿ ಕಡಿಮೆ ಮಾಡಿದ್ದೆವು. ಈಗ ಕೇಂದ್ರ ಸರ್ಕಾರದವರು ಕೊಡತಕ್ಕ ಸಬ್ಸಿಡಿ ಹಂತ ಹಂತವಾಗಿ ಕಡಿಮೆ ಮಾಡಲಿಕ್ಕೆ ನಿರ್ಧರ ಮಾಡಿದ್ದಾರೆ. ಅದ್ದರಿಂದ ಧಾರಣೆ ಹೆಚ್ಚು ಮಾಡಲಿಕ್ಕೆ ಅದೇ ಪ್ರಕಾರ ಹೇಳಿದ್ದಾರೆ.

ಶ್ರೀ ಎ. ಕೃಷ್ಣಶೆಟ್ಟಿ.—ಆಹಾರ ಧಾನ್ಯಗಳ ಸಂಗ್ರಹಣೆ ವಿಷಯದಲ್ಲಿ ಉತ್ತರ ಹೇಳಿದ್ದೀರಿ, ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಎಕರೆಗಿಂತ ಕಡಿಮೆ ಕೃಷಿ ಮಾಡುವವರಿಗೂ ಕೂಡ ಲೆವಿ ಇದೆ, ಕೇರಳದಲ್ಲಿ ಇಲ್ಲ. ಅಲ್ಲಿ ಐದು ಎಕರೆಗೆ ಮೇಲ್ಪಟ್ಟು ಮಾತ್ರ ಇದೆ. ಇಲ್ಲಿ ಕ್ವಿಂಟಾಲ್‌ಗೆ 45 ರೂಪಾಯಿ ಇದೆ-ಅಲ್ಲಿ 55 ರೂಪಾಯಿ ಇದೆ. ಅದ್ದರಿಂದ ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಉತ್ಪನ್ನ ಮಾಡತಕ್ಕ ಬತ್ತದ ಬೆಳೆಗಾರರಿಗೆ ತುಂಬಾ ನಿರಾಶೆ ಬಂದಿದೆ, ಅದನ್ನು ಹೋಗ ರಾಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಈ ವರ್ಷ ಎಂದರೆ, ಸೆಪ್ಟೆಂಬರ್ ಮೊದಲನೇ ತಾರೀಖಿನ ನಂತರ ಅಲ್ಲಿ ಹೆಚ್ಚು ಮಾಡಿದ್ದೇವೆ, ಕೇಂದ್ರ ಸರ್ಕಾರದಿಂದ ನಮಗೆ ಅನುಮತಿ ಬಂದಿದೆ, ಮೊದಲ 30 ಇದ್ದದ್ದು ಈಗ 45 ಆಗಿದೆ ಸ್ಟ್ಯಾಂಡರ್ಡ್ ವೆರೈಟಿ ಆಫ್ ಪ್ಯಾಡಿ. ಎರಡನೆಯದು ಹೊಸ ನೀತಿಯ ಪ್ರಕಾರ ಒಂದು ಎಕರೆಗಿಂತ ಕಡಿಮೆ ಇದ್ದರೆ ಎಲ್ಲವನ್ನೂ ರೈತನೇ ತೆಗೆದುಕೊಳ್ಳುತ್ತಾನೆ.

ಶ್ರೀ ಡಿ. ಮುನಿಚಿನ್ನಪ್ಪ.—ಬೆಂಗಳೂರು ನಾರ್ತ್ ಮತ್ತು ಸೌತ್ ತಾಲ್ಲೂಕಿನಲ್ಲಿರುವ ಜಮೀನೆಲ್ಲಾ ಟ್ರಸ್ಟ್ ಬೋರ್ಡಿನವರಿಂದ ಅಕ್ವೈರ್ ಆಗಿಹೋಗಿರುವುದು ಸರ್ಕಾರದವರಿಗೆ ಗೊತ್ತಿದೆ. ಮತ್ತು ಎಲ್ಲಾ ಫ್ಯಾಕ್ಟರಿಗಳೂ ಈ ಎರಡು ತಾಲ್ಲೂಕುಗಳಲ್ಲೇ ಇರುವುದು. ಅಲ್ಲಿ ಜನಗಳಿಗೆ ತಾವು ಕೊಡುತ್ತಾ ಇರುವ ರೇಷನ್ ಬಹಳ ಕಡಿಮೆ ಆದ್ದರಿಂದ ಇನ್ನು ಮುಂದಾದರೂ ಅಲ್ಲಿನ ಜನಗಳಿಗೆ ತಾವು ಕೊಡುತ್ತಾ ಇರತಕ್ಕ ರೇಷನನ್ನು ಜಾಸ್ತಿ ಮಾಡಿ ಸಹಾಯ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಲಿಂಗೇ ಗೌಡರು ಈಗ ಕೊಡುತ್ತಾ ಇರುವ ರೇಷನ್ ಹೆಚ್ಚು ಎಂದು ಹೇಳುತ್ತಾ ಇದ್ದಾರೆ, ನೀವು ಕಡಿಮೆ ಎಂದು ಹೇಳುತ್ತಾ ಇದ್ದೀರಿ.

ಶ್ರೀ ಬಿ. ಜೆ. ಲಿಂಗೇಗೌಡ.—ಹೆಚ್ಚು ಎಂದು ಹೇಳಲಿಲ್ಲ ಬೆಂಗಳೂರು ಜಿಲ್ಲೆಗೆ ಜಾಸ್ತಿ ಕೊಡಿ ಎಂದು ಹೇಳಿದೆ ಅಷ್ಟೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಹೋಲ್‌ಸೇಲ್ ಡೀಲರ್ಸ್ ಜಿಲ್ಲೆಯಿಂದ ಜಿಲ್ಲೆಯಲ್ಲ ಅಥವಾ ಅದೇ ಜಿಲ್ಲೆಯಲ್ಲಿ ಮಾರಾಟ ಮಾಡಬೇಕಾದರೆ ಪರ್ಮಿಟ್ ತೆಗೆದುಕೊಳ್ಳಬೇಕೆಂದು ಹೇಳಿದಿರಿ. ಬೇರೆ ಜಿಲ್ಲೆಗಳಲ್ಲಿ ಮಾರಾಟ ಮಾಡಿದರೆ ಮಾತ್ರ ಪರ್ಮಿಟ್ ಬೇಕು ಎಂದು ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಈ ರೀತಿ ಮಾಡುವುದಕ್ಕೆ ಕಾರಣವೇನೆಂದರೆ, ಪರ್ಮಿಟ್ ಇಲ್ಲದೆ ಮಾರಾಟ ಮಾಡಿದರೆ ಪ್ರತಿನಾರಿಯೂ ಎರಡು ಪರ್ಸೆಂಟ್ ಕಮಿಷನ್ ಹಾಕಿ ಲಾಭ ಮಾಡುತ್ತಾರೆ, ಅದರಿಂದ ಧಾರಣೆ ಹೆಚ್ಚಾಗುತ್ತದೆ ಆ ರೀತಿ ಆಗಬಾರದು ಎಂಬ ಉದ್ದೇಶದಿಂದ ಮಾಡಲಾಯಿತು.

Confirmation of B.D.Os.

*Q.—48. Sri A. J. DODDAMETI (Ron).—

Will the Minister for Development, Panchayat Raj and Municipal Administration be pleased to state :—

what action has been taken by the Government regarding confirmation of B.D.Os. as per the suggestions of the Central Government to confirm 75 per cent of their posts ?